INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -1, January-February, 2023,
Page No,88 - 93
Peer -Reviewed, Refereed Journal

# “ಧಾರವಾಡದ ಸ್ವಾತಂತ್ರ್ಯ ಹೊರಾಟದ ಹುತಾತ್ಮರ ಸ್ಮಾರಕ ಹಾಗೂ ಗೋರಿಗಳು”

**ಶ್ರೀಮತಿ ಮಂಜುಳಾ ಯಲಿಗಾರ.**[1]

ರಾಷ್ಟ್ರೀಯ ಜಾಗೃತಿ, ರಾಷ್ಟ್ರ ಚಟುವಟಿಕೆಗಳು, ಸ್ವದೇಶಿ ಚಳುವಳಿ, ಹೋಂ ರೂಲ್ ಲಿಗ್, ಅಸಹಕಾರ ಚಳುವಳಿ ಮುಂತಾದವುಗಳನ್ನು ಒಳಗೊಂಡಂತೆ ಇಡೀ ದೇಶದಲ್ಲೆ ತೀವ್ರವಾಗಿ ಬ್ರಿಟಿಷ ವಿರೋಧಿ ಚಳುವಳಿ ನಡೆದಿತ್ತು. 1920ರ ಅಗಸ್ಟರ 1ಕ್ಕೆ ಟಿಳಕರು ತೀರಿಕೊಂಡಾಗ ಎಲ್ಲೆಡೆ ದುಃಖ, ಪ್ರದರ್ಶನ, ನಮನ ಶ್ರದ್ಧಾಂಜಲಿ ಕಾರ್ಯಕ್ರಮಗಳು ನಡೆದವು. ಆ ಸಂದರ್ಭದಲ್ಲಿ ಧಾರವಾಡದ ಟ್ರೆನಿಂಗ್ ಕಾಲೇಜಿನ ವಿದ್ಯಾರ್ಥಿಯಾದ ವಾಮನ ಹೊದಿಕೆರವರು ಹೇಳುವಂತೆ ಟಿಳಕರ ನಿಧನದ 13ನೇ ದಿನದಂದು ಧಾರವಾಡದಲ್ಲಿ ಸಾವಿರಾರು ಜನರು ಸೇರಿ ಸಕ್ಕರೆ ತಿನ್ನಲಿಕ್ಕಿಲ್ಲ, ಚಹಕುಡಿಯಲಿಕ್ಕಿಲ್ಲ, ಬೀಡಿ ಸೇದಲಿಕ್ಕಿಲ್ಲ, ವಿದೇಶಿ ಬಟ್ಟೆ ಧರಿಸಲಿಕ್ಕಿಲ್ಲವೆಂದು ಹಲವಾರು ದೇಶಭಕ್ತಿಯ ನಿಮಿತ್ತ ಪ್ರತಿಜ್ಞೆಗೈದರು, ಅಂದೆ ಮಹಾನ್ ದೇಶಭಕ್ತರ ಮರಣ ಹಲವಾರು ಜನರ ಮನಗಳನ್ನು ಕಲಕಿತ್ತೆಂದು ಹೇಳಬಹುದು.

1920–21ರಲ್ಲಿ ಮಹಾತ್ಮಗಾಂಧೀಜಿಯವರು ಕಲ್ಕತ್ತೆಯಲ್ಲಿ ಅಸಹಕಾರ ಚಳುವಳಿಯನ್ನು ಘೋಷಿಸಿ ದೇಶದ ತುಂಬೆಲ್ಲ ಸಭೆ, ಸಮಾರಂಭಗಳು, ಪತ್ರಿಕೆಗಳ, ಸತ್ಯಾಗ್ರಹಗಳ ಮೂಲಕ ಸಾರ್ವಜನಿಕರ ಹಾಗೂ ಸಮಾಜಕ್ಕೆ ಕಂಟಕಪ್ರಾಯವಾದ ಸೆಂದಿ ಸರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಚಳುವಳಿ ನಡೆಸತೊಡಗಿದರು. ಆ ಸಂದರ್ಭದಲ್ಲಿ ಸ್ವಾತಂತ್ರ ಹೋರಾಟದ ಹಲವಾರು ವಿಚಾರಗಳನ್ನು ಚಿಂತನೆಗಳನ್ನು ಕೂಡಾ ಪತ್ರಿಕೆಗಳ ಮುಖಾಂತರ ಪ್ರಚಾರವಾಗ ತೊಡಗಿದವು. ಕರ್ನಾಟಕ ವೃತ್ತ ವಾಗ್ದೇವಿ, ಕರ್ಮವೀರ, ಸುಭೋಧಯ ಮತ್ತು ರಾಜಹಂಸ ಮುಂತಾದ ಪತ್ರಿಕೆಗಳ ಕೂಡಾ ಪ್ರಾದೇಶಿಕವಾಗಿ ಉಗ್ರವಾದ ಸ್ವಾತಂತ್ರ ಹೋರಾಟದ ಚಿಂತನೆಗಳನ್ನು ಪ್ರಕಟಿಸಲು ಪ್ರಾರಂಭಿಸಿದವು

**ಖಿಲಾಫತ್ ಚಳುವಳಿ:**

1919ರ 1ನೇ ಮಹಾಯುದ್ಧದ ಕೊನೆಗೆ ಶಾಂತಿ ದಿನ ಎಂದು ವಿಜಯೋತ್ಸವ ಆಚರಿಸಲು ಸರ್ಕಾರ ಕರೆ ನೀಡಿತು. ಆದರೆ ತುರ್ಕಿಯ ಖಲೀಫನ ಆಡಳಿತ ಕೊನೆಯಾದ್ದರಿಂದ ಅಸಮದಾನಗೊಂಡ

---

1.ಸಂಶೋಧನಾ ವಿದ್ಯಾರ್ಥಿ,ಚರಿತ್ರೆ ವಿಭಾಗ,ಹಾ.ಮಾ.ನ. ಸಂಶೋಧನ ಕೇಂದ್ರ,ಉಜಿರೆ. ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಮುಸ್ಲಿಂರು ಭಾಗವಹಿಸಿರಲಿಲ್ಲ. 1919 ಡಿಸೆಂಬರ್ 22 ರಂದು ವಿಜಯೋತ್ಸವದ ಮೆರವಣಿಗೆ ಧಾರವಾಡದಲ್ಲಿ ನಡೆದಿತ್ತು. ಕೆಲವೊಂದು ವರ್ಗದ ಜನರು ನೌಕರರು ಮಾತ್ರ ಇದರಲ್ಲಿ ಭಾಗವಹಿಸಿದ್ದರು ಹಾಗೂ 1919 ಮಾರ್ಚ್ 26 ರಂದು ಖಿಲಾಫತ್ ದಿನಾಚರಣೆಯನ್ನಾಚರಿಸಲು 26 ಹಿಂದೂವಾದಿಗಳು, ಮುಸಲ್ಮಾನರು ಸಹಿ ಮಾಡಿ ಕರಪತ್ರ ಹೊರಡಿಸಿದರು. ಈ ಎಲ್ಲ ಬೆಳವಣಿಗೆಗಳನ್ನು ಕಂಡ ಆಗ ಜಿಲ್ಲಾಧಿಕಾರಿಯಾದ ಎಚ್.ಎಲ್.ಪೆಂಟರ ಎಂಬಾತನು ಅಸಹಕಾರ ಚಳುವಳಿಯ ವಿರುದ್ದವಾಗಿ ಸರಾಯಿ ಅಂಗಡಿ ಮುಂದೆ ಪಿಕೆಟಿಂಗ್‌ಗೆ ಸಂಬಂಧಿಸಿದಂತೆ ಇಬ್ಬರು ಖಿಲಾಫತ್ ಸ್ವಯಂ ಸೇವಕರನ್ನು ಸೆರೆ ಹಿಡಿದು ಆರು ತಿಂಗಳು ಜೈಲು ಶಿಕ್ಷೆಯನ್ನು ವಿಧಿಸಿದನು. ಇದರ ಪರಿಣಾಮವಾಗಿ ಧಾರವಾಡದಲ್ಲಿ ಚಳುವಳಿಗಾರರು ವಿಚಲಿತರಾಗದೇ ಅನ್ಯಾಯದ ವಿರುದ್ದ ಶಾಂತಿಯುತವಾದ ಪ್ರತಿಭಟನೆಯನ್ನು ಮಾಡಲು ಸಿದ್ಧರಾಗಿ ಜುಲೈ 1, 1921 ರಂದು ಧಾರವಾಡದಲ್ಲಿ ಹರತಾಳ ಆಚರಿಸಿದರು. ಇಲ್ಲಿ ಪ್ರತಿಭಟನಾ ಸಭೆಯೊಂದಿಗೆ ಜನರು ಹರತಾಳದಲ್ಲಿ ಹುಮ್ಮಸ್ಸಿನಿಂದ ಭಾಗವಹಿಸಿದರು.

**ಗೋಲಿಬಾರ್:**

1921 ಜೂನ್ 30 ರಂದು ಧಾರವಾಡದ ಪೋಲೀಸ್ ಠಾಣೆಯ ಹತ್ತಿರ ಜನಸಂದಣಿ ಸೇರಿ ಶಾಂತಿಯುತವಾಗಿ ಸಭೆ ನಡೆಸುತ್ತಿದ್ದ ಸ್ವಯಂ ಸೇವಕರ ವಿರುದ್ಧ ಸರಾಯಿ ಅಂಗಡಿ ಮುಗ್ಗಟ್ಟುಗಳನ್ನು ಸುಡಲು ಯತ್ನಿಸಿದರು. ದೊಂಬಿ, ಗಲಾಟೆಗಳು ನಡೆಸಿದರೆಂದು ಸುಳ್ಳು ಸುದ್ದಿ ಹಬ್ಬಿಸಿ ಈ ಕಾರಣದಿಂದ ಪೋಲೀಸರು ಗೋಲಿಬಾರ್ ನಡೆಸಿದರು. ಅಲ್ಲದೇ ಜಿಲ್ಲಾಧಿಕಾರಿ ಆದೇಶದ ಮೇರೆಗೆ ಶಿವಲಿಂಗಪ್ಪನೆಂಬ ಫೌಜದಾರನು ಗುಂಡಿನ ಮಳೆ ಸುರಿಸಿದನು. ಈ ಗುಂಡಿನೇಟಿಗೆ 3 ಖಿಲಾಫತ್ ಸ್ವಯಂಸೇವಕರಾದ ಮಲ್ಲಿಕಸಾಬ್, ಬಿನ್‌ಮರ್ದಾನ್‌ಸಾಬ ಗೌಸುಸಾಬ ಬಿನ್‌ಖಾದರಸಾಬ ಮತ್ತು ಅಬ್ದುಲಖಾದರ ಚುಕತಾಯಿ ಎಂಬ ಮೂವರು ಬಲಿಯಾದರು. 39 ಜನರಿಗೆ ಗಾಯಗಳಾದವು. ಈ ಸಂದರ್ಭದಲ್ಲಿ ದೃತಿಗೆಡದೆ ಧೈರ್ಯದಿಂದ ಮುನ್ನುಗ್ಗಿ ಮುದವೀಡು ವೆಂಕಟರಾಯರು ಹೆಣಗಳನ್ನು ಹೊರಗೆ ತೆಗೆದರು. ಈ ಕಾರಣದಿಂದಾಗಿ ವೆಂಕಟರಾಯರ ವಕೀಲ ವೃತ್ತಿಯು ಹೋಯಿತು. ಕೊನೆಗೆ 3 ವರ್ಷ ಕಠಿಣ ಶಿಕ್ಷೆಯನ್ನು ಕೂಡಾ ವಿಧಿಸಲಾಯಿತು.

**ನ್ಯಾಯ ವಿಚಾರಣೆ (ಕೋರ್ಟ್):**

ವಿಚಾರಣೆಗೆಂದೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯೇ ಅಬ್ಬಾಸ್ ತಯಬ್ಜಿ, ಭವಾನಿಶಂಕರ ನಿಯೋಗಿ, ಎಸ್.ಎಸ್. ಸಡ್ಲೂರ್ ಇವರನ್ನೊಳಗೊಂಡ ವಿಚಾರಣ ಆಯೋಗವನ್ನು ನೇಮಿಸಿತು. ಆಗ ಸರಕಾರವು 29 ಜನರನ್ನು ಬಂಧಿಸಿ, ದೊಂಬಿಯ ನೆಪದಿಂದ 27 ಜನರ ಮೇಲೆ ಸುಳ್ಳು ಕಟ್ಲೆ ಹಾಕಿತು. ಈ ಖಟ್ಲೆ ದೀರ್ಘಕಾಲ ನಡೆಯಿತು. ಈ ಸಂದರ್ಭದಲ್ಲಿ ಲಾಲಾ ಲಜಪತರಾಯರು ಧಾರವಾಡಕ್ಕೆ ಬಂದು ಕೈದಿಗಳನ್ನೆಲ್ಲ ಭೇಟಿ ಮಾಡಿ, ಧೈರ್ಯತುಂಬಿ ಸಾರ್ವಜನಿಕ ಭಾಷಣ ಮಾಡಿದರು. ಬಂಧಿತರ

ನೈತಿಕ ಧೈರ್ಯ ಕಂಡು ಹರ್ಷಿತರಾದರು. ಈ ಘಟನೆಯಿಂದ ಧಾರವಾಡದ ಸ್ವರಾಜ್ಯ ಚಳುವಳಿ ಹೋರಾಟಗಾರರ ವಿಷಯ ಹಿಂದೂಸ್ತಾನದ ಜನತೆಗೆ ಪರಿಚಿತವಾಯಿತು. ಈ ಗುಂಡಿನೇಟಿಗೆ 3 ಖಿಲಾಫತ್ ಸ್ವಯಂಸೇವಕರಾದ ಮಲ್ಲಿಕಸಾಬ್, ಬಿನ್‌ಮರ್ದಾನ್‌ಸಾಬ, ಗೌಸುಸಾಬ ಬಿನ್‌ಖಾದರಸಾಬ ಮತ್ತು ಅಬ್ದುಲಖಾದರ ಚುಕತಾಯಿ ಎಂಬ ಮೂವರು ಬಲಿಯಾದರು ಹಾಗೂ ಈ ಗಲಾಟೆಯಲ್ಲಿ 39 ಜನರು ಗಾಯಗೊಂಡರು.

ಈ ಖಟ್ಲೆಯಲ್ಲಿ ರಂಗರಾವ ದಿವಾಕರ, ಹನಮಂತರಾವ್ ದೇಸಾಯಿ, ಗೋಪಾಳರಾವ್ ದೇಶಪಾಂಡೆ, ಮದರಸಾಬ ಕಟಗಾರ, ನಿರಪರಾಧಿಗಳೆಂದು ಬಿಡುಗಡೆಯಾದರು. ವೆಂಕಟರಾವ ಮುದುವಿಡಕರ, ಮಧ್ವರಾವ್ ಕಬ್ಬೂರು, ದಾಮೋದರ ಹರ್ಲೇಕರ, ಅಬ್ದುಲ್ ಖಲಾಸಿ, ಅಬ್ದುಲ ರಹಿಮಾನ್ ರೋಟಿವಾಲಾ ಇವರಿಗೆ ಮೂರು ವರ್ಷ ಕಠಿಣ ಶಿಕ್ಷೆಯಾಯಿತು. ಅನಂತದಾಬಡೆ, ಉಸ್ಮಾನ್ ಮುಲ್ಲಾ, ಸುಲ್ತಾನ ಮೋಹಿದ್ದೀನ್ ರಾಮದುರ್ಗ, ಶೇಕಮೊಹಿದ್ದೀನ್ ದರೋಗ, ನರಸಿಂಗ್ ನಾರಾಯಣ ಭಿಸೆ, ಶಾಲಂಭಟ್, ಖಂಡಭಟ್ ಬುಡಾನ ಛಪ್ಪರಬಂದ, ಇವರಿಗೆ 2 ವರ್ಷ ಶಿಕ್ಷೆ ಆಯಿತು. ತಿರುಮಲರಾವ್ ಜೋಗಿ, ವಾಮನ ಜಕಾರ್, ಅಣ್ಣಾಚಾರ್ಯ ಹೊಸಕೇರಿ, ಮಧ್ವಚಾರ್ಯ ಕಲಕೇರಿ, ಮಾಧವ ಕಮಲಾಪೂರ, ಇಮಾಮ್ ಮಣಿಯಾರ ಮೊಹಮ್ಮದ ಸಾಬ ಸೌದಾಗಾರ್, ಗೋವಿಂದಚಾರ್ಯ ಗುತ್ತಲ ಇವರಿಗೆ ತಲಾ ಒಂದು ವರ್ಷ ಕಠಿಣ ಶಿಕ್ಷೆಯಾಯಿತು. ಪಿಕೆಟಿಂಗ್ ಕಾಲಕ್ಕೆ ಹೊಡೆತದ ಗಾಯಕ್ಕಾಗಿ ಗೋವಿಂದರಾವ ಗುತ್ತಲರು ವಕೀಲರ ವೃತ್ತಿಯನ್ನು ತ್ಯಜಿಸಿ ದೀರ್ಘಕಾಲ ಚಿಕಿತ್ಸೆಗೆ ಒಳಗಾದರು. ಇದು ದಬ್ಬಾಳಿಕೆಯ ಸ್ವರೂಪವಾಗಿ ಬ್ರಾಹ್ಮಣರನ್ನು ಮುಸಲ್ಮಾನರನ್ನು ದೇಶದ್ರೋಹಿಗಳೆಂದು ಹಿಂಸೆಗೊಳಪಡಿಸುವ ಉದ್ದೇಶದಿಂದ ಬ್ರಿಟಿಷ್ ಆಳರಸರು ವೈಮನ್ನಸ್ಸನ್ನುಂಟು ಮಾಡಿ ಆಂತರಿಕ ವೈಮನಸ್ಸುಗಳ ಸಹಾಯ ಪಡೆದ ಪೆಂಟರನು ಸುಳ್ಳು ಸಾಕ್ಷಿ ಪಡೆಯುವಲ್ಲಿ ಯಶಸ್ವಿಯಾದನು. ಸಹಾಯ ಮಾಡಿದ ಸಾಕ್ಷೀದಾರರನ್ನು ಕೈದು ಮಾಡದೆ ಕೈದು ಮಾಡಿದ 29 ಜನರಲ್ಲಿ ಲಿಂಗಾಯತರ ಪೈಕಿ ಒಬ್ಬರೂ ಇರಲಿಲ್ಲವೆಂಬುದು 15 ಜನ ಬ್ರಾಹ್ಮಣರು 13 ಮುಸಲ್ಮಾನರು 1 ಮರಾಠ ಇದ್ದರು ಎಂದು ಸ್ವಾತಂತ್ರ್ಯ ಯೋಧ ರಘುನಾಥ ಮೋವಿನ ಜಕಾರ ಹೇಳುತ್ತಾರೆ. ಹನುಮಂತರಾವ್ ದೇಸಾಯಿ ನಿರ್ದೋಷಿ ಸಾರಿ ಬಿಡುಗಡೆ ಮಾಡಿದ ಸೆಶನ್ ಜಡ್ಜ್ 19 ಜನರಪೈಕಿ 13 ಜನ ಸಾಕ್ಷಿದಾರರು ಜಾತಿ ದ್ವೇಷದ ಮೂಲಕ ಸಾಕ್ಷಿ ಕೊಟ್ಟವರು.

ಧಾರವಾಡದ ಈ ಗೋಲಿಬಾರಿನ ನೆನಪು ಪ್ರತಿಕ್ರಿಯೆ ಒಳಪಟ್ಟು ಜನ ಜಾಗೃತಿಗೆ ಕಾರಣವಾಯಿತು. ಅಸಹಕಾರ ವರ್ಷದಲ್ಲಿ ಶಿಕ್ಷೆಗೊಳಪಟ್ಟವರು ಕರ್ನಾಟಕದಲ್ಲಿ ಹೆಚ್ಚು. ಜೊತೆಗೆ ಧಾರವಾಡದಲ್ಲಿ ಅತಿ ಹೆಚ್ಚು

ಜನ ಶಿಕ್ಷೆಗೆ ಒಳಗಾದರು. ನಿರ್ದೋಷಿಯಾಗಿ ಬಿಡುಗಡೆಗೊಂಡ ದಿವಾಕರರು ಹಾಗೂ ಆಲೂರು ವೆಂಕಟರಾಯರು ಸರ್ಕಾರ ಕೈಗೊಂಡ ತಪ್ಪು ಕ್ರಮದ ಬಗ್ಗೆ ಪ್ರಕಟಿಸಿದರು. ಆ ಖಟ್ಲೆಯ ವಿಚಾರವಾಗಿ ಅಂದಿನ ಪತ್ರಿಕೆಗಳಿಗೆ ಸ್ವತಃ ಆಲೂರರೇ ಲೇಖನಗಳನ್ನು ಬರೆಯುತ್ತಿದ್ದರು.

**ಹುತಾತ್ಮರ ಗೋರಿಗಳು:**

ಈ ಗೋಲಿಬಾರ್‌ದಲ್ಲಿ ಗುಂಡಿನೇಟಿಗೆ ತೀರಿಕೊಂಡ ಈ ಮೂವರಾದ ಮಲ್ಲಿಕಸಾಬ ಬಿನ್ ಮರ್ದಾನಸಾಬ್, ಗೌಸಸಾಬ ಬಿನ್ ಖಾದರಸಾಬ್ ಮತ್ತು ಅಬ್ದುಲ್ ಖಾದರ ಚುಕತಾಯಿ ಇವರನ್ನು ಧಾರವಾಡ ಹೊಸಯಲ್ಲಾಪುರದಲ್ಲಿರುವ ಅಂಜುಮನ್ ಇಸ್ಲಾಂ ಖಬರಸ್ತಾನದಲ್ಲಿ ಸಮಾಧಿ ಮಾಡಲಾಗಿದೆ.

ಈ ಸಮಾಧಿಯಲ್ಲಿ ಹುತಾತ್ಮರ ಗೋರಿಗಳು ದಕ್ಷಿಣೋತ್ತರವಾಗಿ ಚೌಕಾಕಾರದ ತಳವಿನ್ಯಾಸವುಳ್ಳ ಪಟ್ಟಿಕೆಯ ಮೇಲುಗಡೆ 3 ಮುಸ್ಲಿಂ ಗೋರಿಗಳನ್ನು ನಿರ್ಮಿಸಲಾಗಿದೆ. ಅಲ್ಲದೇ ಸುಣ್ಣ ಮಿಶ್ರಿತಗಾರೆ, ಸಿಮೆಂಟು, ಕಲ್ಲು ಇಟ್ಟಿಗೆಗಳಿಂದ ನಿರ್ಮಾಣವಾಗಿದೆ. ಪ್ರಸ್ತುತ ಗೋರಿಗಳು ಸಂರಕ್ಷಣೆ ಇಲ್ಲದೇ ಸುತ್ತಲೂ ಮುಳ್ಳುಕಂಟಿ ಪೊದೆಗಳು ಬೆಳೆದುಕೊಂಡು ಅವಸಾನದ ಹಂಚಿನಲ್ಲಿದೆ. ಅಲ್ಲದೇ ಈ ಗೋರಿಗಳಿಗೆ ಹೊಂದಿಕೊಂಡಂತೆ ಮುಂಭಾಗದಲ್ಲಿ ಉತ್ತರಾಭಿಮುಖವಾಗಿ 3 ಜನ ಹುತಾತ್ಮರ ಹೆಸರು ಹಾಗೂ ನಿರ್ಮಿಸಿದಂತಹ ನಾರಾಯಣರಾವ ರಾಯ್ಕರ ಹಾಗೂ ರಾಜಾಕಸಾಬ್ ನವಲೂರು ಎಂಬ ಉಲ್ಲೇಖವು ಈ ಸ್ಮಾರಕ ಕಲ್ಲಿನಲ್ಲಿ ನಮೂದಿಸಲಾಗಿದೆ. ಅಲ್ಲದೇ ಮೇಲ್ಭಾಗದಲ್ಲಿ ಸ್ಥಾಪನೆಯ ಇಸ್ವಿ ಕೂಡಾ 01–07–1921ರ ಇಸ್ವಿಯ ಉಲ್ಲೇಖವಿದ್ದು ಇಸ್ಲಾಮಿಕ ಚಿಹ್ನೆ ಅರ್ಧಚಂದ್ರ ಹಾಗೂ ನಕ್ಷತ್ರದ ಉಲ್ಲೇಖವಿದೆ.

**ಹುತಾತ್ಮರ ಸ್ಮಾರಕ:**

ಹುತಾತ್ಮರ ಸ್ಮರಣಾರ್ಥವಾಗಿ ಜಕಣಿಬಾವಿಯ ಹತ್ತಿರ ಸ್ಮಾರಕ ಸ್ತಂಭವು 1921 ಜುಲೈ 1ರಂದು ಧಾರವಾಡದಲ್ಲಿ ನಡೆದ ಗೋಲಿಬಾರ್ ಸ್ಮರಣಾರ್ಥವಾಗಿ 3 ಖಿಲಾಫತ್ ಚಳುವಳಿಗಾರರಾದ ಮಲ್ಲಿಕಸಾಬ ಬಿನ್ ಮರ್ದಾನಸಾಬ್, ಗೌಸಸಾಬ ಬಿನ್ ಖಾದರಸಾಬ್ ಮತ್ತು ಅಬ್ದುಲ್ ಖಾದರ ಚುಕತಾಯಿ ಇವರ ಹೆಸರನ್ನು ನಮೂದಿಸಿದ ಸ್ಮಾರಕ ಸ್ತಂಭವನ್ನು ಇತ್ತೀಚೆಗೆ ಧಾರವಾಡದ ಮಹಾನಗರಸಭೆಯವರು ನಿಲ್ಲಿಸಿದ್ದಾರೆ. ಪ್ರತಿವರ್ಷ ಹುತಾತ್ಮರ ದಿನದಂದು ಕೆಲವು ಜನರು ಸೇರಿ ಹುತಾತ್ಮರ ಆತ್ಮಕ್ಕೆ ಶಾಂತಿ ಕೋರುತ್ತಾ ಬಂದಿದ್ದಾರೆ. ಆದರೆ ಈ ತರುಣರ ಬಲಿದಾನ ಆದ ಜಾಗೆಯಲ್ಲೆ ಇಂದು ಮದ್ಯದ ಅಂಗಡಿಗಳಿವೆ. ಅಲ್ಲದೇ ಸ್ಮರಣಾರ್ಥವಾಗಿ ಸ್ವಾತಂತ್ರ್ಯ ಹೋರಾಟದ ಅಚ್ಚಳಿಯದ ಈ ಸ್ಮರಣಿಯ ಹುತಾತ್ಮರ ಸ್ಮಾರಕ ಹಾಗೂ ಹುತಾತ್ಮರ ಸಮಾಧಿಗಳನ್ನು ಇಂದು ಸಂರಕ್ಷಿಸಿ ಸ್ಮರಿಸುವುದು ಕೂಡಾ ಆಗಬೇಕಾಗಿದೆ.

## ಛಾಯಾಚಿತ್ರಗಳು





**ಧಾರವಾಡದ ಸ್ವಾತಂತ್ರ್ಯ ಹೋರಾಟದ ಹುತಾತ್ಮರ ಸ್ಮಾರಕ**

ಗೋಳಿಬಾರ್ ಸಂದರ್ಭದಲ್ಲಿ ನಡೆದ ಗಲಾಟೆಯಲ್ಲಿ ಗಾಯಗೊಂಡ 30 ಜನರ ಪಟ್ಟಿ ಹಾಗೂ 27 ಜನರ ಸುಳ್ಳು ಖಟ್ಲೆ – ಝರಾಕ್ಸ ಪ್ರತಿ ಲಗತ್ತಿಸಿದೆ.









**ಪರಾಮರ್ಶನ ಗ್ರಂಥಗಳು :–**


- ಕಟಗೇರಿ ನ.ಹ., *ಗತಕಾಲದ ಧಾರವಾಡ,* ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳ, ಧಾರವಾಡ. 2007–08.
- ಕಾಮತ್ ಸೂರ್ಯನಾಥ, *ಕರ್ನಾಟಕ ರಾಜ್ಯ ಗೆಜೆಟಿಯರ್ ಧಾರವಾಡ ಜಿಲ್ಲೆ,* ಸರ್ಕಾರಿ ಮುಸ್ತಕ ಮುದ್ರಣಾಲಯ, ಬೆಂಗಳೂರು. 1995.
- ಶಂ.ವಾ. ಜತಾರ & ಮನೋಜ ಪಾಟೀಲ (ಸಂ), *ಧಾರವಾಡ ಮಾರ್ಗದರ್ಶಿ,* ಅಭಿಜಾತ ಪ್ರಕಾಶನ, ಧಾರವಾಡ.
- ಕ್ಷೇತ್ರಕಾರ್ಯದ ವರದಿ ದಿನಾಂಕ: 05/02/2002